**ಪಿ ಡಬ್ಲೂ : 1**

ಸಾಕ್ಷಿಗೆ ದಿನಾಂಕಃ **19.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರಃ ಶ್ರೀ ಟಿ.ಎಸ್. ವಕೀಲರಿಂದ:</u>**

ಜಮೀನನ್ನು ನಮಗೆ ಬರೆದುಕೊಡದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ನಮ್ಮ ಜಮೀನಿನಲ್ಲಿ ವ್ಯವಸಾಯ ವೃತ್ತಿಯನ್ನು ಮಾಡುತ್ತೇನೆ. ನನಗೆ ಸೇರಿದಂತೆ ಎಷ್ಟು ಜಮೀನು ಇದೆ ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ. ನನಗೆ ಒಬ್ಬ ಮಗ ಇರುತ್ತಾರೆ. ಸರ್ವೆ ನಂ.54 ರಲ್ಲಿ 2 ಎಕರೆ ಮತ್ತು 1 ಎಕರೆ 38 ಗುಂಟೆ, ಸರ್ವೆ ನಂ.92 ರಲ್ಲಿ 38 ಗುಂಟೆ ನನಗೆ ಸೇರಿದಾಗಿರುತ್ತದೆ. ನನ್ನ ಮಗನು ಮತ್ತು ನನ್ನ ಪತ್ನಿ ಮೃತರಾಗಿದ್ದು, ನಾನೊಬ್ಬನೇ ವ್ಯವಸಾಯ ಮಾಡುತ್ತೇನೆ. ದಾವಾ ಸ್ವತ್ತು ನಂದೀಪುರದಲ್ಲಿ ಇರುತ್ತದೆ. ಬಸವೇಗೌಡ, ಬಸವರಾಜು, ಸಿದ್ದರಾಜು, ಕುಮಾರ್ ರವರು ನನಗೆ ಕರಾರು ಪತ್ರ ಬರೆದುಕೊಟ್ಟಿರುತ್ತಾರೆ. ಸದರಿಯವರು ನಮ್ಮ ಗ್ರಾಮದವರು ಎಂದರೆ ಸರಿಯಲ್ಲ. ನಮ್ಮ ಗ್ರಾಮದಿಂದ ನಂದೀಪುರ ಗ್ರಾಮಕ್ಕೆ ಸುಮಾರು 15 ರಿಂದ 20 ಕಿ.ಮೀ. ಅಂತರ ಇರುತ್ತದೆ. ನಮ್ಮ ಗ್ರಾಮದಿಂದ ಸಾತನೂರು ಮಾರ್ಗವಾಗಿ ನಂದೀಪುರಕ್ಕೆ ಹೋಗಬೇಕಾದರೆ ಸುಮಾರು 30 ಕ್ಕಿ.ಮೀ. ದೂರ ಇರುತ್ತದೆ. ನಾನು ಬೈಕನ್ನು ಚಾಲನೆ ಮಾಡುತ್ತೇನೆ. ಪ್ರತಿವಾದಿಗಳು ನನಗೆ ಹೊಸದಾಗಿ ಪರಿಚಯವಾದ ವ್ಯಕ್ತಿಗಳು ಅಗಿರುತ್ತಾರೆ. ರಾಮೇಗೌಡ ಬಿನ್ ವೆಂಕಟೇಗೌಡ ರವರು ದಾವಾ ಸ್ವತ್ತನ್ನು ಪ್ರತಿವಾದಿಗಳು ಮಾರಾಟ ಮಾಡುತ್ತಿರುವ ಬಗ್ಗೆ ನನಗೆ ಹೇಳಿರುತ್ತಾರೆ. ಸದರಿಯವರು ನಮ್ಮ ಗ್ರಾಮದ ಪಕ್ಕದ ಗ್ರಾಮವಾದ ಕುರುಬರಹಳ್ಳಿ ಗ್ರಾಮದವರು ಅಗಿರುತ್ತಾರೆ.

2) ನಾನು ವಾರ್ಷಿಕವಾಗಿ 15 ಲಕ್ಷ ರೂಪಾಯಿ ಅದಾಯ ಹೊಂದಿರುತ್ತೇನೆ. ನನಗೆ ಸೇರಿದಂತೆ ಒಟ್ಟು 4 ಎಕರೆ 37 ಗುಂಟೆ ಸ್ವತ್ತು ಇರುತ್ತದೆ. ಸದರಿ ಜಮೀನಿನಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದೇನೆ. ನನ್ನ ಅದಾಯದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಆ ರೀತಿ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಸ್ವಲ್ಪ ಲೇವಾದೇವಿ ವ್ಯವಹಾರ ಮಾಡುತ್ತೇನೆ. ನಾನು ನಮ್ಮ ಗ್ರಾಮದ ಅಕ್ಕ ಪಕ್ಕದ ಹಳ್ಳಿಯ ವ್ಯಕ್ತಿಗಳಿಗೆ ಸಾಲವನ್ನು ನೀಡುತ್ತೇನೆ ಎಂದರೆ ಸರಿ. ವಾರ್ಷಿಕವಾಗಿ 2 ರಿಂದ 3 ಲಕ್ಷ ರೂಪಾಯಿ ಲೇವಾದೇವಿ ವ್ಯವಹಾರ ಮಾಡುತ್ತೇನೆ. ನಾನು 6 ರಿಂದ 7 ವರುಷಗಳಿಂದ

ವಾರ್ಷಿಕವಾಗಿ 15 ಲಕ್ಷ ರೂಪಾಯಿ ಅದಾಯ ಹೊಂದಿರುತ್ತೇನೆ. ಅದರ ಪ್ರಕಾರ ನಾನು ಸದರಿ ಸಾಲಿನಿಂದ ಸುಮಾರು 90 ಲಕ್ಷ ರೂಪಾಯಿವರೆಗೆ ವಹಿವಾಟನ್ನು ಮಾಡಿರುತ್ತೇನೆ.

3) 13 ತಾರೀಖು ಕರಾರು ಪತ್ರವನ್ನು ಬರೆಸಿದ್ದು, ಒಬ್ಬ ವ್ಯಕ್ತಿಯು ಬರದ ಕಾರಣ 14 ನೇ ತಾರೀಖು ನೊಂದಣಿ ಅಗಿರುತ್ತದೆ. ನಾನು ಅದಕ್ಕಿಂತ ಪೂರ್ವದಲ್ಲಿ ದಾವಾ ಸ್ವತ್ತನ್ನು ನೋಡಿರುತ್ತೇನೆ. ಸದರಿ ಜಮೀನು ಖುಷ್ಕಿ ಜಮೀನು ಅಗಿರುತ್ತದೆ. ಸದರಿ ಸ್ವತ್ತಿನಲ್ಲಿ ಹುರುಳಿ ಮತ್ತು ರಾಗಿಯನ್ನು ಬೆಳೆಯುತ್ತಿದ್ದರು. ನಾನು ಕ್ರಯದ ಕರಾರು ಅಗುವ ಪೂರ್ವದಲ್ಲಿ ಪ್ರತಿವಾದಿಗಳ ಮನೆಗೆ ಹೋಗಿ ವಿಚಾರಣೆ ಮಾಡಿರುತ್ತೇನೆ. ನಾನು ಅವರ ಮನೆಗೆ ಹೋದಾಗ 1ನೇ ಪ್ರತಿವಾದಿ ಮತ್ತು ಅವರ ಪತ್ನಿ ಇದ್ದರು, ನಾನು ಅವರ ಮನೆಗೆ ಹೋದಾಗ ಅವರ ಗಂಡು ಮಕ್ಕಳು ಇರಲಿಲ್ಲ. ದಾವಾ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂದು ನಾನು ಅವರನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಅಸ್ತಿಯನ್ನು ಖರೀದಿ ಮಾಡುವಾಗ ಇರುವ ಪ್ರಕ್ರಿಯೆ ಬಗ್ಗೆ ನನಗೆ ಅರಿವು ಇರುತ್ತದೆ ಎಂದರೆ ಸರಿ. ಅದೇ ರೀತಿ ಅಸ್ತಿಯ ಸ್ವರೂಪದ ಬಗ್ಗೆ ಕೇಳಿ ತಿಳಿದುಕೊಳ್ಳುವ ಅರಿವನ್ನು ನಾನು ಹೊಂದಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತು ಪಿತ್ರಾರ್ಜಿತ ಎಂದು 1ನೇ ಪ್ರತಿವಾದಿ ಮತ್ತು ಅವರ ಪತ್ನಿಯು ಹೇಳಿದ್ದರು. ಆ ರೀತಿ ಪಿತ್ರಾರ್ಜಿತ ಸ್ವತ್ತು ಎಂದು ಹೇಳಿದಾಗ 1ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನಾನು ಕೇಳಿ ತಿಳಿದುಕೊಂಡಿರುತ್ತೇನೆ. ಕರಾರು ಅಗಿರುತ್ತದೆ ಎಂದು ಹೇಳುವ ಕಾಲಕ್ಕೆ 1ನೇ ಪ್ರತಿವಾದಿಯ ಎಲ್ಲ ಮಕ್ಕಳು ಬರಬೇಕೆಂದು ಹೇಳಿದ್ದೆ. ಕರಾರು ಪತ್ರ ಅಗುವ ಕಾಲಕ್ಕೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು ಬಂದಿದ್ದರು, ಕರಾರು ನೊಂದಣಿಯಾಗ ಬೇಕಾದರೆ ವಿಳಂಬವಾದ ಕಾರಣ ಅವರ ಹೆಣ್ಣು ಮಗಳು ಹೊರಟು ಹೋಗಿರುತ್ತಾರೆ. ಅ ರೀತಿ 1ನೇ ಪ್ರತಿವಾದಿಯ ಮಗಳು ಕರಾರಿಗೆ ಸಹಿ ಮಾಡದ ಸಂಬಂದವಾಗಿ ಸದರಿ ಕರಾರಿನಲ್ಲಿ ಒಕ್ಕಣೆ ಯನ್ನು ಬರೆಸಿರುವುದಿಲ್ಲ. ಸದರಿ ಸಂಗತಿಯನ್ನು ನೋಟೀಸಿನಲ್ಲಿ ಹೇಳಿರುತ್ತೇನೆ. 5 ಲಕ್ಷದ 50 ಸಾವಿರ ರೂಪಾಯಿಗಳಿಗೆ ಕರಾರು ಮಾಡಿಕೊಂಡಿರುತ್ತೇನೆ. ಸದರಿ ಮೊತ್ತವನ್ನು ಯಾವ ಮೂಲಕ ಪಾವತಿ ಮಾಡಿರುತ್ತೇನೆ ಎಂದು ನಿಪಿ-1 ರಲ್ಲಿ ಬರೆಸಿರುವುದಿಲ್ಲ. ನಾನು 5ಲಕ್ಷ ರೂಪಾಯಿಯನ್ನು ನಗದು ರೂಪದಲ್ಲಿ ಪಾವತಿ ಮಾಡಿರುತ್ತೇನೆ. 500 ರೂ ಮುಖ ಬೆಲೆಯ ನೋಟುಗಳನ್ನು ನೀಡಿರುತ್ತೇನೆ. ಎಷ್ಟು ನೋಟುಗಳು ಇತ್ತು ಎಂದು ಹೇಳಲಾಗುವುದಿಲ್ಲ. 2014 ರಲ್ಲಿ ನನ್ನ ಮಗ ಮೃತರಾಗಿದ್ದು, ಅದ್ದರಿಂದ ವಿಮೆ ಹಣ 9 ಲಕ್ಷ ರೂಪಾಯಿ ಬಂದಿತ್ತು. ಆ ಸಂಬಂದವಾಗಿ ದಾಖಲೆ ಇರುವುದಿಲ್ಲ, ಆದರೆ ನನ್ನ ಸೊಸೆಯ ಬ್ಯಾಂಕ್ ಖಾತೆಗೆ ಸದರಿ ಮೊತ್ತ ಬಂದಿತ್ತು. ನಾನು ಆ ರೀತಿ ಬಂದ ಮೊತ್ತವನ್ನು ಪಡೆದಿರುತ್ತೇನೆ. ನಿಪಿ-1 ಕ್ಕೆ ನನ್ನ ಸೊಸೆಯನ್ನು ಸಾಕ್ಷಿದಾರರಾಗಿ ಸಹಿ ಮಾಡಿಸಿರುವುದಿಲ್ಲ.

4) ನಿಪಿ-1 ಮಾಡಿಸಿರುತ್ತೇವೆ ಎಂದು ಹೇಳುವ ಕಾಲಕ್ಕೆ ರಾಮೇಗೌಡ ಮತ್ತು ಮಳವಳ್ಳಿ ಕಡೆಯ ಮತ್ತೊಬ್ಬ ವ್ಯಕ್ತಿ ಇದ್ದರು. ಸದರಿಯವರ ಊರು ತೆಂಕಹಳ್ಳಿ ಅಗಿರುತ್ತದೆ. ನಿಪಿ-1 ನ್ನು ಮಳವಳ್ಳಿಯಲ್ಲಿ ತಯಾರು ಮಾಡಿಸಿರುತ್ತೇವೆ. ಪ್ರತಿವಾದಿಗಳು ನನ್ನಿಂದ 4 ಲಕ್ಷ ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಎಷ್ಟು ವಿಸ್ತೀರ್ಣದ ಜಮೀನು ಇತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಸರ್ವೆ ನಂ.47/1ಬಿ ಅಗಿರುತ್ತದೆ. ಪ್ರತಿವಾದಿಗಳಿಗ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಸ್ವತ್ತು ಇಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ರೇಷ್ಮೆ ಬೆಳೆ ಬೆಳೆದು ಜೀವನ ನಡೆಸುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 36 ತಿಂಗಳುಗಳಿಗೆ ಕರಾರನ್ನು ಮಾಡಲಾಗಿರುತ್ತದೆ. ಕರಾರು ಅಗಿರುತ್ತದೆ ಎಂದು ಹೇಳುವ ಕಾಲಕ್ಕೆ ದಾವಾ ಸ್ವತ್ತಿನ ಸರ್ಕಾರಿ ಮೌಲ್ಯ ಎಷ್ಟು ಇತ್ತು ಎಂದು ನಾನು ತಿಳಿದುಕೊಂಡಿರಲಿಲ್ಲ, ಆ ರೀತಿ ತಿಳಿದುಕೊಳ್ಳಲು ತೊಂದರೆ ಇರಲಿಲ್ಲ. 36 ತಿಂಗಳು ಕರಾರು ಎಂದು ಯಾವ ಕಾರಣಕ್ಕಾಗಿ ಬರೆಸಿಕೊಂಡಿರುತ್ತೀರಾ ಎಂದರೆ ಅವರು ಬರೆದುಕೊಟ್ಟಿರುತ್ತಾರೆ. 3 - 4 ತಿಂಗಳ ನಂತರ ನಾನು 1ನೇ ಪ್ರತಿವಾದಿಯನ್ನು ಬೇಟಿ ಮಾಡಿ ಕೇಳಿದ್ದು, ಅದರೆ ಅವರು ಬರೆದುಕೊಟ್ಟಿರುವುದಿಲ್ಲ, ಉಳಿದವರು ನನಗೆ ಸಿಕ್ಕಿರುವುದಿಲ್ಲ. ಈ ಸಂಬಂದವಾಗಿ ಪ್ರತಿವಾದಿಗಳಿಗೆ ನೋಟೀಸನ್ನು ನೀಡಲು ಅಥವಾ ಅವರ ವಿರುದ್ದ ಪೋಲೀಸರಿಗೆ ದೂರು ನೀಡಲು ತೊಂದರೆ ಇರಲಿಲ್ಲ. ಈ ದಿನ ನ್ಯಾಯಾಲಯಕ್ಕೆ 4ನೇ ಪ್ರತಿವಾದಿ ಬಂದಿರುತ್ತಾರೆ. ಅವರು ಏನು ವೃತ್ತಿಯನ್ನು ಮಾಡುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

5) ದಿನಾಂಕ 14.08.2015 ರಂದು ಪ್ರತಿವಾದಿಗಳು 4 ಲಕ್ಷ ರೂಪಾಯಿಗಳನ್ನು ನನ್ನಿಂದ ಸಾಲವಾಗಿ ಪಡೆದು ತಿಂಗಳಿಗೆ 1 ರೂಪಾಯಿ ಬಡ್ಡಿಯಂತೆ 4ನೇ ಪ್ರತಿವಾದಿಯು 2015 ರಿಂದ 2017 ರವರೆಗೆ ಪಾವತಿ ಮಾಡಿರುತ್ತಾರೆ ಎಂದರ ಸರಿಯಲ್ಲ. 4ನೇ ಪ್ರತಿವಾದಿಯು ಬಡ್ಡಿಯನ್ನು ಪಾವತಿ ಮಾಡುತ್ತಾ ಬಂದ ಕಾರಣ ನಾನು ವಿಳಂಬವಾಗಿ ನೋಟೀಸನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವ ದಿನಾಂಕದಂಂದು ಪ್ರತಿವಾದಿಗಳಿಗೆ ನೋಟೀಸನ್ನು ನೀಡಿರುತ್ತೇನೆಂದು ನೆನಪಿರುವುದಿಲ್ಲ, ಕನಕಪುರ ವಕೀಲರ ಮೂಲಕ ಸದರಿ ನೋಟೀಸನ್ನು ನೀಡಿರುತ್ತೇನೆ. ದಿನಾಂಕ 09.03.2018 ರಂದು ಪ್ರತಿವಾದಿಗಳು ನನಗೆ ಪ್ರತ್ಯುತ್ತರ ನೋಟೀಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ನೋಟೀಸನ್ನು ಸ್ವೀಕರಿಸಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಕೀಲರಿಗೆ ಸದರಿ ಪ್ರತ್ಯುತ್ತರ ನೋಟೀಸನ್ನು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಮಗಳು ಮತ್ತು ಪತ್ನಿಗೆ ನೋಟೀಸನ್ನು ನೀಡಿರುತ್ತೇನೆ. ನಾನು ಸದರಿಯವರಿಗೆ ನೋಟೀಸನ್ನು ನೀಡಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯು ಮೃತರಾದ ನಂತರ ಅವರ ಪತ್ನಿ ಮತ್ತು ಮಗಳನ್ನು ಈ

ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುತ್ತೇನೆ ಎಂದರೆ ಸರಿ. ಆನಂತರ ಕರಾರಿನ ಬಗ್ಗೆ ಸದರಿಯವರಿಗೆ ಗೊತ್ತಾಗಿರುತ್ತದೆ ಎಂದರೆ ಸರಿ. ನಾನು ಲೇವಾದೇವಿ ವ್ಯವಹಾರಕ್ಕೆ ಪ್ರತಿವಾದಿಗಳಿಗೆ ಸಾಲ ನೀಡಿ ಬಡ್ಡಿ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. 4 ಲಕ್ಷ ರೂಪಾಯಿಗಳಿಗೆ ತಿಂಗಳಿಗೆ 1 ರೂಪಾಯಿಯಂತೆ ಬಡ್ಡಿಯನ್ನು ಸೇರಿಸಿ 2017 ರಿಂದ ಪ್ರತಿವಾದಿಗಳು ಪಾವತಿ ಮಾಡಲು ತಯಾರು ಇರುತ್ತಾರೆ ಎಂದರೆ ನಾನು ಒಪ್ಪುವುದಿಲ್ಲ. ನಾನು ಸಾಲದ ಭದ್ರತೆಗೆ ನಿಪಿ-1 ನ್ನು ಬರೆಸಿಕೊಂಡಿರುತ್ತೇನೆಂದರೆ ಅದು 5 ಲಕ್ಷ ರೂಪಾಯಿ ಅಗಿರುತ್ತದೆ. ಪ್ರತಿವಾದಿಗಳು ಈ ಮೇಲೆ ಹೇಳಿದ ಸಂಗತಿಗಳನ್ನು ಒಳಗೊಂಡಂತೆ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಅದರ ಬಗ್ಗೆ ವಕೀಲರ ಮೂಲಕ ತಿಳಿದುಕೊಂಡಿರುವುದಿಲ್ಲ. ಅದನ್ನು ತಿಳಿದುಕೊಳ್ಳಲು ತೊಂದರೆ ಇರುವುದಿಲ್ಲ.

ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಮಳವಳ್ಳಿ